Regd No M 1299 33 ನೇ ವರ್ಷ ತಾ॥12—6—50

ಸತ್ಯವಾದಿ
SATYAVADI

ಸ್ಥಾಪಕರು: ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

1954 ರಲ್ಲಿ ವಿಶ್ವ ಅಂತವಾಗುತ್ತದೆ !

ನ್ಯೂಯಾರ್ಕ್ : 1954 ರ ಏಪ್ರಿಲ್ 7 ರಲ್ಲಿ ಪ್ರಪಂಚವು ಕೊನೆಗಾಣುವ ಕಾಲದಲ್ಲಿ ಭದ್ರವಾಗಿರಲು ಅನುಕೂಲಿಸುವಂತೆ 20 ಸಹಸ್ರ ಮಂದಿ ಅಮೇರಿಕರು ಭದ್ರವಾದ ನಿವಾಸಸ್ಥಾನ ನಿರ್ಮಿಸುತ್ತಿರುವರು.

ವಲೆಯಾಳಿಗಳು ಹಿಂದೂಕೋಡ್ ಮಸೂದೆಯನ್ನು ಒಪ್ಪುತ್ತಾರೆಂದು ಡಾ॥ ಅಂಬೇಡ್ಕರ್ ಮದ್ರಾಸ್ನಲ್ಲಿ ಹೇಳಿದ್ದಾರೆ

ಪಾಟಿಯಾಲ ಬಂದೀಖಾನೆ ಸ್ಥಿತಿ ಹತೋಟಿಗೆ ಬಂದಿದೆ.

ಸ್ಟಾಲಿನ್ ಚೀನಕ್ಕೆ ಬಂದಿದ್ದಾರೆಂದು ಲಂಡನ್ ವಂದಿ.

22 ನೇ ತಾರೀಖು
ನೀರಾವರಿಗೆ ನೀರು ಬಿಡ್ಲಾಗುತ್ತದೆ

[ಪಿ. ಐ ಬಿ] ಬೆಂಗಳೂರು, 10

ಕಾವೇರಿ ನದಿಯಲ್ಲಿ ಕಡಿಮೆ ನೀರು ಹರಿಯುತ್ತಿರುವುದರಿಂದ ಕೃಷ್ಣರಾಜಸಾಗರ ಜಲಾಶಯದ ಮೇಲೆ ಕೆಳಗಿರುವ ನಾಲೆಗಳನ್ನು, 10 ನೆ ತಾರೀಖು ತೆರೆಯಬೇಕಾಗಿದ್ದುದನ್ನು ನೀರಾವರಿಗಾಗಿ 22 ನೇ ತಾರೀಖು ತೆರೆಯಲಾಗುವುದು.

ಪರಿಸ್ಥಿತಿಯನ್ನು ಪುನಃ ವಿಮರ್ಶಿಸಿ ಸುಧಾರಣೆ ಆ ಒಳಗೆ ಕಂಡುಬಂದಲ್ಲಿ ನೀರನ್ನು ಜಾಗ್ರತವಾಗಿಯೇ ಬಿಡಲಾಗುವುದು.

ವೃಡ್ಲ್ಯಾಂಡ್ಸ್

ಯಶಸ್ವಿ 3 ನೇ ವಾರ

ಮೋತೀಲಾಲ್, ಸೂರೈಯ ಸಿತಾರ, ಕಕ್ಕೂ ಅಭಿನಯಿಸಿರುವ ಸುಂದರ ಹಿಂದೀ ವಾಕ್ಚಿತ್ರ

LEKH ■ ಲೇಖ್

ಪ್ರತಿ ದಿನ 2 ಪ್ರದರ್ಶನಗಳು

ಮುಸ್ಲಿಂ ಮಹಾಜನರ ಕೋರಿಕೆಯಂತೆ
ಮೆಕ್ಕದ ಹಜ್ ಚಿತ್ರವು
ಲೇಖ್ ಚಿತ್ರದೊಂದಿಗೆ
ಇನ್ನೊಂದುವಾರ ಪ್ರದರ್ಶಿಸಲಾಗುತ್ತೆ

ಅಪೇರಾ
8-6-50 ರಿಂದ
ಮಿಸ್ ಕುಮಾರಿ — ಮೈಕಂ ಮಣಿ
ಪಾತ್ರವಹಿಸಿರುವ ಸುಂದರ ಚಿತ್ರ
ಅತ್ಯದ್ಭುತ ವಿಚಾರಂಗಳಿಂದಲೂ
ಸಾಹಸ ಕಾರ್ಯಗಳಿಂದಲೂ
ಮನಮೋಹಕ ದೃಶ್ಯಗಳಿಂದ ಕೂಡಿದ
ಅವಶ್ಯ ನೋಡಬೇಕಾದ ಚಿತ್ರ
ನಲ್ಲತಂಗಾಳ್
(ಮಲಯಾಳಂ ಭಾಷೆ)

ರಣಜಿತ್ ಟಾಕೀಸಿನಲ್ಲಿ—
9—6—50 ರಿಂದ ವೈಭವಶಾಲಿ ಆರಂಭವಾಗಿದೆ
ನಂಲಕ್ಷ್ಮಿ, ಪ್ರಕಾಶರಾವ್
ಶಿವರಾವ್ ನಾರಾಯಣರಾವ್
ಅಭಿನಯಿಸಿರುವ
ಮಧುರ ಸಂಗೀತದಿಂದ
ಸ್ವಾರಸ್ಯ ಸನ್ನಿವೇಶಗಳಿಂದ ಕೂಡಿದ
ಅಮೋಘ ಸಾಮಾಜಿಕ ತೆಲುಗು ಚಿತ್ರ
ಪ್ರಕಾಶ್ ಪ್ರೊಡಕ್ಷನ್ಸ್ ರವರ
ಮೊದಲ ರಾತ್ರಿ
[First Night]
.... ಇಂದೇ ನೋಡಿ ಆನಂದಿಸಿರಿ ....
ಪ್ರತಿ ದಿನ 3 ಆಟಗಳು
— A Prakash Pictures Release

ಬೆಂದು ಭಸ್ಮವಾದುವು

ಅಹಮದಾಬಾದಿನ ಸರ್ಕಾರಿ ಧಾನ್ಯ ಡಿಪೋವಿನಲ್ಲಿದ್ದ 2300 ಚೀಲಗಳಷ್ಟು 2 5 ಲಕ್ಷ ರೂ ಬಾಳುವ ಅಕ್ಕಿ, ಗೋಧಿ ಬೆಂಕಿ ಬಿದ್ದು ಮೊನ್ನೆ ನಾಶವಾದವು

ಆಯುಧ ಸಂಬರಾಜು

ಅಟ್ಲಾಂಟಿಕ್ ಒಡಂಬಡಿಕೆ ಮಿತ್ರರಿಗೆಲ್ಲ ಅಮೇರಿಕಾ ರಹಸ್ಯ ಆಯುಧಗಳನ್ನು ರವಾನಿಸಿದೆಯೆಂದು ವಾಷಿಂಗ್ಟನ್ ವಾರ್ತೆ.

ಅರಮನೆ ವಾಪಸ್

ಪೋಲೀಸ್ ಕ್ರಮ ನಡೆದಾಗ ಕಲ್ಕತ್ತಾದಲ್ಲಿನ ನಿಜಾಂ ಅರಮನೆಯನ್ನು ಭಾರತ ಸರ್ಕಾರ ಅಧೀನಕ್ಕೆ ತೆಗೆದು ಕೊಂಡಿದ್ದು ಈಗ ವಾಪಸ್ ಮಾಡಲಾಗುತ್ತದೆ.

ಸತ್ಕಾರಕೂಟಗಳು

ಯೂರೋಪ್ ಪ್ರವಾಸ ಹೋಗುವ ತಾಯಿನಾಡು ಸಂಪಾದಕ ಶ್ರೀ ಪಿ. ಬಿ. ಶ್ರೀನಿವಾಸ್ ಹಾಗೂ ಆ ಪತ್ರಿಕೆಯ ಮೈಸೂರು ಬಾತ್ಮಿದಾರ ಶ್ರೀ ಶ್ರೀನಿವಾಸಮೂರ್ತಿಯವರ ಗೌರವಾರ್ಥ ಮೊನ್ನೆ ಸಂಜೆ ಮೈಸೂರು ಪೌರಸಭೆ, ನಿನ್ನೆ ದಿನ ಶ್ರೀ ವರಲಕ್ಷ್ಮಿ ಸಂಗೀತ ಮಂದಿರದಲ್ಲಿ ಸತ್ಕಾರ ಸಮಾರಂಭಗಳು ಜರುಗಿದವು.

ವಿಗ್ರಹ ಇಲ್ಲ

ಬೆಳ್ಳಿ ತಟ್ಟೆಯಲ್ಲಿ ದೇವರನ್ನು ಕೆತ್ತಿ ಪೂಜಿಸುವ ಸಂಪ್ರದಾಯ ಕೊಂಕಣಿ ದೇವಾಲಯಗಳಲ್ಲಿದೆ. ಅಲ್ಲಿ ದೇವರುಗಳು ಪ್ರತಿಮೆ ರೂಪದಲ್ಲಿರುವುದಿಲ್ಲ.

ಕಂಪೆನಿ ಆಡಳಿತದಲ್ಲಿ

ಭಾರತದ ರಾಜ್ಯಭಾರವನ್ನು ಈಸ್ಟ್ ಇಂಡಿಯ ಕಂಪೆನಿ ವಹಿಸಿ ಕೊಂಡಿದ್ದಾಗ ಮಳೆ ಬರಲು ಉತ್ಸವ ಮಾಡಲು ಸರ್ಕಾರದಿಂದ ಧನ ಮಂಜೂರಾಗುತ್ತಿತ್ತು

ಪಂ॥ ನೆಹರು ಹೇಳಿಕೆ

ಭಾರತ ವಿರುದ್ಧ ಬ್ಲಾಕ್‌ಮಾರ್ಕೆಟ್‌ಗಳನ್ನು ಹೊತ್ತು ಬಂದಿದ್ದ ಕಮ್ಯುನಿಸ್ಟರನ್ನು ಪಂ॥ ನೆಹರು ಉತ್ಕಂಠನಿಸ್ತರು. ಭಾರತವು ಅನೇಕ ದೇಶಗಳಿಗಿಂತ ಹೆಚ್ಚು ಪ್ರಜಾಸ್ವಭುತ್ವ ಪಾಲನೆಯುದಾಗಿದೆ ಎಂದರು.

ಕನ್ನಂಬಾಡಿ ಕಟ್ಟೆ
ನೀರಿನ ಮಟ್ಟ ಹೆಚ್ಚಿದೆ

ನೆಸೂರು ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರು ಇಂದಿನಿಂದ ಕೆಲಸಕ್ಕೆ ತೆರಳಿದರು

ಮಹಾರಾಷ್ಟ್ರದ ಸಮಾಜವಾದಿ ಮುಖಂಡ ಶ್ರೀ ಸಾನೆ ಗುರೂಜಿ ನಿನ್ನೆ ನಿಧನರಾದರೆಂದು ಬೊಂಬಾಯಿ ವರದಿ.

'ವಿಶ್ವ ಸಹೋದರತ್ವ' ಎಂಬ ಅಭಿದಾನದಿಂದ ಅಂತರ್ರಾಷ್ಟ್ರೀಯ ಸಂಸ್ಥೆ ಆರಂಭವಾಯಿತೆಂದು ಪ್ಯಾರಿಸ್ ವರದಿ.

ನಾಗ್ಪುರದಲ್ಲಿ ಮೊನ್ನೆ ಮೊನ್ನೆ ಸಮಾವೇಶಗೊಂಡಿದ್ದ ಅಖಿಲ ಭಾರತ ರೈಲ್ವೆ ಫೆಡರೇಷನ್ ಭಾರತ ಸರ್ಕಾರ ತಂದಿರುವ 2 ವ ಸೂದೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದೆ.

ಎಲ್ಲಪುರಂನಿಂದ ಬಂದ ವಾರ್ತೆಯಂತೆ 'ಫ್ರೆಂಚ್' ಭಾರತದಿಂದ ಭಾರತಕ್ಕೆ ಬಂದ ಪೋಲೀಸ್ ಪ್ಯಾದೆಯೋರ್ವ 100 ತೊಲೆ ಭಂಗಾರವನ್ನು ಒಚ್ಚಿ ತಂದನೆಂದು ಬಂಧಿಸಲ್ಪಟ್ಟಿದ್ದಾನೆ.

ಸಾವಿರದೈನೂರು ಪೌಂಡು ಪರಿಹಾರವನ್ನು ಲಂಡನ್ ಕಮ್ಯುನಿಸ್ಟ್ ಪಕ್ಷ ಪೋಲೀಸ್ ಅಧಿಕಾರಿಯೋರ್ವನಿಗೆ ಆತನ ನೇಲೆ ಮಾಡಿದ ಅಪಮಾನಕಾರಕ ಟೀಕೆ ಒಗ್ಗೆ ಕೊಡಬೇಕೆಂದು ನ್ಯಾಯಾಸ್ಥಾನ ತೀರ್ಪಿತ್ತಿದೆ.

ಜಾವಾದ ಪ್ರಚಂಡ ಜ್ವಾಲಾಮುಖಿ ವಾಮಾಂಡ-ವಾರ್ಗೆ ಪಂ॥ ನೆಹರು ಸಂದರ್ಶನವಿತ್ತು ಅಲ್ಲಿ ಏರ್ಪಡಿಸಿದ ಶಿಲಾಸ್ಮಾರಕದಲ್ಲಿ ಸಹಿ ಹಾಕಿದರು.

1942 ರ ಜಲೇಜಾವ್ ಜಿಲ್ಲೆಯಲ್ಲಿ ಬ್ರಿಟಿಷರಿಂದ ಗಲ್ಲಿಗೇರಿಸಲ್ಪಟ್ಟ ವೀರ ಹೇಮು ಕಲಾನಿಯ ವೃದ್ಧ ನಿಶ್ಶಕ್ತ ತಂದೆಗೆ 1000 ರೂ ಮತ್ತು ತಿಂಗಳಿಗೆ 50 ರೂ ಸಂತಾಪ ಪರಿಹಾರ ಕೊಡಲಾಗಿದೆಯೆಂದು ಬೊಂಬಾಯಿ ಸಿಂಧ್ ಹಿಂದೂ ಸೇವಾ ಸಮಿತಿ ತಿಳಿಸಿದೆ

ಭಾರತ ಸರ್ಕಾರವು 50—51 ರಲ್ಲಿ ಸ್ವಾತಂತ್ರಪಟ್ಟ ಜನತೆಯ ಗೃಹ ನಿರ್ಮಾಣ ಕಾರ್ಯದ ದೆಸೆಯಿಂದ 25 ರೂಪಾಯಿ ವೆಚ್ಚ ಮಾಡಿದೆಯೆಂದು ಅಧಿಕೃತವಾಗಿ ತಿಳಿಯುತ್ತದೆ.

ಲಂಚ ಬ್ರಿಟಿಷ್ ಬ್ಯಾಡ್ ಕಾಸ್ಟಿಂಗ್ ಕಾರ್ಪೊರೇಷನ್‌ನಲ್ಲಿ ಹೆಚ್ಚಿದೆಯೆಂಬ ಹೆ. ತನಿಪೆಗೆ ಸ್ಕಾಟ್ಲೆಂಡ್‌ಯಾರ್ಡ್ ಸಿ ಐ ಡಿ ಗಳನ್ನು ಕರೆಯಲಾಗಿದೆ.

Edited, Printed and Publishedby M. S. Krishna Rao. at the Satyavadi Press, Chamarajapuram Mysore

ಸಂಪುಟ ೮ ಸಂಚಿಕೆ ೪೨ ॥ ಶ್ರೀ ॥ ತಾ|| 12-6-1950

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಆಧುನಿಕ ವಿಕಾಸವಾದ

[ಮುಂದುವರಿದುದು]

ಕಾಷ್ಠ ಮುಂತಾದ ಪಾರ್ಥಿವ ಅಥವಾ ಜಲೀಯ ಪದಾರ್ಥಗಳ ಸಂಸರ್ಗದಿಂದಲೇ ಅಗ್ನಿಯಲ್ಲಿ ದಾಹಕತ್ವವೂ ಪ್ರಕಾಶತ್ವವೂ ಅಭಿವ್ಯಕ್ತವಾಗುತ್ತವೆ. ಆದಾಗ್ಯೂ ದಾಹಕತೆಯೂ, ಪ್ರಕಾಶತೆಯೂ ಕಾಷ್ಠಾದಿಗಳ ಧರ್ಮವೆಂದು ತಿಳಿಯಲ್ಪಡುವುದಿಲ್ಲ. ಅಂತೆಯೇ ಯದ್ಯಪಿ ದೇಹದಲ್ಲಿ ಚೈತನ್ಯವು ಅಭಿವ್ಯಕ್ತವಾದರೂ ದೇಹದ ಧರ್ಮವು ಚೈತನ್ಯವಲ್ಲ. ದೇಹವಿಲ್ಲದಾಗ ಅದು ಉಪಲಬ್ಧವಾಗುವುದಿಲ್ಲವಾದರೆ, ಇದರಿಂದ ಅದರ ಅಭಾವವಾಯಿತೆಂದು ಹೇಳಲಾಗುವುದಿಲ್ಲ. ಆ ವೇಳೆಯಲ್ಲಿ ಅದರ ಅಭಿವ್ಯಂಜಕ ಮಾತ್ರ. ಒಂದು ವಸ್ತುವು ಉಪಲಬ್ಧವಾಗುವುದರಲ್ಲಿ – ಒಂದೋ ಸ್ವಯಂ ಅದರದೇ ಅಭಾವ, ಅಥವಾ ಅದರ ಅಭಿವ್ಯಂಜಕನ ಅಭಾವ. ಇವೆರಡೂ ಹೇತುಗಳಾಗಬಹುದು.

ಪ್ರತಿಯೊಂದು ಪದಾರ್ಥದಲ್ಲಿಯೂ, ಪ್ರತಿಯೊಂದು ತತ್ವದಲ್ಲಿಯೂ ಅಸ್ತಿತ್ವ, ಸತ್ತೆ ಅಥವಾ ಇರವನ್ನು ಒಪ್ಪಲೇಬೇಕಾಗುವುದು ಯಾರೇ ಆಗಲಿ, ಎಲ್ಲಿಯೇ ಆಗಲಿ, ಯಾವುದೇ ಪದಾರ್ಥವನ್ನು, ಹೇಗಾದರೂ ಕಲ್ಪಿಸಲಿ, ಅದರ ಸತ್ತೆಯನ್ನು ಸ್ವೀಕರಿಸದೆ ಕೆಲಸ ಸಾಗದು. ಫಲತಃ ಸತ್ತೆಯು ದಿನಾ ಎಲ್ಲವೂ ನಿಸ್ಸತ್ವ–ನಿಷ್ಪ್ರಯೋಜಕಗಳಾಗುವುವು. ಅಸತ್ ಪರಮಾಣು, ಅಸತ್ ಪ್ರಕೃತಿ, ಅಸತ್ ವಿದ್ಯುತ್ತು, ಮುಂತಾದ ' ಅಸತ್ ' ಎಂಬುದನ್ನೊಂದು ತತ್ವವೆಂದೇ ಹೇಳಲಾಗುವುದಿಲ್ಲ ಆದರಿಂದ ಯಾವುದೇ ಕಾರ್ಯದ ಆಶೆಯೂ ಇರಲಾರದು ಏಕೆಂದರೆ ಅಸತ್ತಿನಲ್ಲಿ ಕಾರಣತೆಯು ಅಸಂಭವ, ಆದುದರಿಂದ ಸತ್ತೆಯೇ ಕಾರಣವಾದೀತು. ಈ ಸತ್ತನ್ನು ಜಡವೆಂದು ಹೇಳುವುದಾದರೆ, ತನ್ನನ್ನು ತಾನೇ ಅದು ತಿಳಿದು ಕೊಳ್ಳಲಾರದು. ಹಾಗಿರುವಾಗ ಅನಂತ ಕಾರ್ಯಗಳನ್ನೂ, ಅವುಗಳ ಸಾಮಗ್ರಿಗಳನ್ನೂ, ನಿರ್ಮಾಣ ಪ್ರಕಾರಗಳನ್ನೂ ಹೇಗೆ ತಾನೆ ಅರಿಯಬಲ್ಲುದು? ಕಾರ್ಯವಿಲ್ಲದೆಯೂ ಸಹ ಕಾರಣವಿರಬಲ್ಲುದು; ಆದರೆ ಕಾರ್ಯದ ಸ್ಥಿತಿಯೂ, ಪ್ರವೃತ್ತಿಯೂ, ಜೀವನವೂ ಕಾರಣಕ್ಕೇ ಅಧೀನವಾಗಿರುತ್ತವೆ. ಈ ನ್ಯಾಯದಿಂದ, ಯಾವುದರಿಂದ ಎಲ್ಲವೂ ಅವಿರ್ಭವಿಸುವುವೋ ಮತ್ತು ಎಲ್ಲವುಗಳ ವಿನಾಶವೂ ಯಾವುದರಿಂದಾಗಬಲ್ಲುದೋ – ಅದೇ ಕಾರಣವೂ ಅಧಿಷ್ಠಾನವೂ ಆಗಬಲ್ಲುದು. ಘಟಾದಿಗಳು ಪೃಥ್ವಿಯಲ್ಲಿ ಅಂತರ್ಭೂತಗಳಾಗಿವೆ, ಅದರೆ ತೇಜಸ್ಸು ಪೃಥ್ವ್ಯಾಧಿಯಲ್ಲಿ ಅಂತರ್ಭವಿಸಿಲ್ಲ. ತೇಜದೊಳಗೆ ಜಲ–ಪೃಥಿವ್ಯಾದಿ ಎಲ್ಲಾ ಪಾರ್ಥಿವ ಪ್ರಸಂಜಗಳೂ ಒರಬಲ್ಲುವು. ಆದರೆ ಆಕಾಶವು ಅವೆಲ್ಲವುಗಳ ಒಳಗೂ ಹೊರಗೂ ಸರ್ವತಾ ಇದೆ. ಆಕಾಶಕ್ಕಿಂತ ಅಂತರಂಗಗಳಾದ ಅಹಂಕೃತ್ವ, ಮಹತ್ತತ್ವ, ಅವ್ಯಕ್ತತತ್ವಾದಿ ಪದಾರ್ಥಗಳು ಯಾವುದರಲ್ಲಿ ಅಂತರ್ಭವಿಸುವುವೋ ಮತ್ತು ಯಾವುದು ಅವುಗಳೊಳಗೆ ಎಲ್ಲವುಗಳ ಕಾರಣರೂಪದಲ್ಲಿದ್ದೂ ಅವುಗಳಿಗಿಂತ ಪೃಥಕ್ಕಾಗಿರುವುದೋ – ಅದೇ ಮಹಾ ಕಾರಣವಾಗಬಲ್ಲುದು. ಆ ಅಂತಿಮ ಸತ್ತೇ ಸರ್ವದೇಶಗಳಿಗೂ, ಸರ್ವಕಾಲಗಳಿಗೂ, ವಸ್ತುಗಳಿಗೂ ಕಾರಣರೂಪವಾದ ಅಧಿಷ್ಠಾನವು. ಈ ಕಾರಣ ಅಥವಾ ಅಧಿಷ್ಠಾನವು ಎಲ್ಲವುಗಳಲ್ಲಿದ್ದೂ ಎಲ್ಲಕ್ಕಿಂತ ಪೃಥಕ್ಕಾಗಿ ಅನಂತವಾದುದು. ಅದು ಎಲ್ಲವುಗಳಿಗಿಂತಲೂ ಅಪರಿಚ್ಛಿನ್ನವೂ, ಸೂಕ್ಷ್ಮವೂ ನಿರ್ವಿಶೇಷವೂ, ನಿರ್ಗುಣವೂ, ಅದೃಶ್ಯವೂ, ಸ್ವಚ್ಛವೂ, ಅಸಂಗವೂ ಆಗಿದೆ. ಯದ್ಯಪಿ ಇಂತಹ ಯಾವುದೇ ವಸ್ತುವು ಕಾಣಿಸುವುದಿಲ್ಲವೆಂದು ಹೇಳಬಹುದಾದರೂ, ಒಂದು ದೃಷ್ಟಿಯಿಂದ ಇದರ ದರ್ಶನವು ಸರ್ವದಾ ಸರ್ವರಿಗೂ ಸ್ಪಷ್ಟವಾಗಿದೆ. ಘಟ ದರ್ಶನಕ್ಕೆ ಮುಂಚೆ ಮಣ್ಣಿನ ದರ್ಶನವು ಅನಿವಾರ್ಯವಾಗಿರುವಂತೆಯೇ, ಸ್ಥೂಲ ದರ್ಶನಕ್ಕಿಂತ ಮೊದಲೇ ಸ್ವಪ್ರಕಾಶವಾದ ಸತ್ತಿನ ದರ್ಶನವೂ ಅನಿವಾರ್ಯವಾದುದು. ಆದರೆ ಕಾರಣದ ಕಲ್ಪಿತ ಪದಾರ್ಥಗಳ ಅನಿರ್ವಚನೀಯವಾದೊಂದು ವಿಲಕ್ಷಣ ಜಡತತ್ವವೇನೆಂದರೆ – ಅವು ತಮ್ಮ ಸ್ವಭಾವದಿಂದ ತಮ್ಮ ಕಾರಣ ಅಥವಾ ಅಧಿಷ್ಠಾನವನ್ನು ಮುಚ್ಚಿಬಿಡುತ್ತವೆ. ಇನ್ನೊಂದು ದೃಷ್ಟಿಯಿಂದ ನೋಡಿದಲ್ಲಿ, ಸತ್ತತ್ವವು ತೋರುವುದಿಲ್ಲವಾದುದರಿಂದಲೇ ಅದು ಪರಮಾರ್ಥ ತತ್ವವೆಂದು ವಿದಿತವಾಗುವುದು, ಜಗತ್ತು ಗೋಚರಿಸುತ್ತಿದೆ, ಆದುದರಿಂದಲೇ ಅದು ಇಲ್ಲ ಲೋಕದಲ್ಲಾದರೋ ಯಾವುದು ತೋರುತ್ತದೋ, ಅದಿದೆಯೆಂದೂ, ಯಾವುದು ಕಾಣಿಸುವುದಿಲ್ಲವೋ, ಅದಿಲ್ಲವೆಂದೂ ಪ್ರಸಿದ್ಧವಾಗಿದೆ. ಆದರೆ ವಿಜ್ಞಾನ ಹೇಳಿಕೆಯೇನೆಂದರೆ – ಯಾವುದು ಕಾಣಿಸುತ್ತದೆಯೋ, ಅದು ಕಾಣಿಸುತ್ತದಾದುದರಿಂದಲೇ ಮಿಥ್ಯೆ; ಯಾವುದು ಗೋಚರಿಸುವುದಿಲ್ಲವೋ, ಅದೇ ವಾಸ್ತವಾರ್ಥಿಕ ಸತ್ಯ ಅದೃಶ್ಯವೆ ದೃಕ್ಸ್ವರೂಪವು, ಈ ರೀತಿ ಸರ್ವಸತ್ತಾ, ಸರ್ವಾಧಿಷ್ಠಾನ, ಸರ್ವ ಪ್ರಕಾಶಕ, ಸರ್ವಾಂತರಾತ್ಮಾ, ಅಖಂಡಸತ್, ಅಖಂಡಬೋಧ ಸ್ವರೂಪವೇ ಆ ಅಂತಿಮ ತತ್ವವು; ಇದಕ್ಕಿಂತ ಮುಂದೆ ಜಿಜ್ಞಾಸೆಯು ಪ್ರಶಾಂತವಾಗುತ್ತದೆ.

ಈ ಯುಕ್ತಿಗಳಿಂದ ಅಪರಿಗಣಿತ ಪ್ರಪಂಚೋತ್ಪಾದಿನೀ – ಅನಿರ್ವಚನೀಯ ಶಕ್ತಿ ಸಂಪನ್ನ, ಅಖಂಡ, ಅನಂತ, ಸ್ವಪ್ರಕಾಶವೇ ಈ ಸರ್ವ ಪ್ರಪಂಚಕ್ಕೂ ಮೂಲನೆಂದು ಸಿದ್ಧವಾಗುವುದು. ವಿಕಾಸವಾದದ ಮತಾನುಸಾರ ವಾಲದಲ್ಲಿ ಅಸ್ಪಷ್ಟತೆಯೂ ನಿಕೃಷ್ಟತೆಯೂ ಪ್ರಮಾಣಿತವಾಗಿ, ಪಲ್ಲವ ಅಥವಾ ಫಲದಲ್ಲಿ ಸ್ಪಷ್ಟತೆಯೂ, ಉತ್ಕೃಷ್ಟತೆಯೂ ನಿಶ್ಚಿತವಾಗುತ್ತದೆ. ಆದರೆ ಪ್ರಾಚೀನ ವೈದಿಕ ಮತದಲ್ಲಿ ಮೂಲದ ಉತ್ಕೃಷ್ಟತೆಯೂ, ಪಲ್ಲವಾದಿಗಳ ನಿಕೃಷ್ಟತೆಯೂ ಸಿದ್ಧವಾಗುತ್ತದೆ. ಆದ್ದರಿಂದಲೇ ' ಊರ್ಧ್ವಮೂಲಮಧಃಶಾಖಮಶ್ವತ್ಥಂ ಪ್ರಾಹುರವ್ಯಯಮ್ ' ಎಂಬ ಗೀತಾ ವಾಕ್ಯದಲ್ಲಿ ಸಂಸಾರ ವೃಕ್ಷದ ಮೂಲವನ್ನು ಉತ್ಕೃಷ್ಟವೆಂದು ಹೇಳಲಾಗಿದೆಯಲ್ಲದೆ ಶಾಖೆಯು ನಿಕೃಷ್ಟವೆಂದು ಹೇಳಿದೆ. ಹೊರಗಿನ ದೃಷ್ಟಿಯಿಂದ ಉಕ್ತವಾಕ್ಯದ ಭಾವವು, ಸಂಸಾರವೆಂಬುದೊಂದು ಅಶ್ವತ್ಥ ವೃಕ್ಷವೆಂದೂ, ಅದರ ಬೇರು ಮೇಲ್ಗಡೆಯಿಂದೆಯೆಂದೂ ಶಾಖೆಗಳು ಕೆಳಗಡೆಯಿಂದೆಯೆಂದೂ ತೋರುತ್ತದಾದರೂ ಇದೊಂದು ರೂಪಕವೇ ಸರಿ, ತಾತ್ಪರ್ಯವೇನೆಂದರೆ – ಈ ಸಂಸಾರ ವೃಕ್ಷದ ಮೂಲವು ವ್ಯಾಪಕವೂ, ಶುದ್ಧವೂ, ಮಹತ್ತೂ, ಅವ್ಯಕ್ತವೂ ಆದುದು, ಶಾಖೆಪಲ್ಲವಾದಿಗಳು ಪರಿಚ್ಛಿನ್ನವೂ, ಅಶುದ್ಧವೂ, ಅಲ್ಪವೂ, ಮರ್ತ್ಯವೂ ಆದುವುಗಳು. ಇಲ್ಲಿ ಸ್ಪಷ್ಟವಾಗಿಯೇ ಆಧುನಿಕ ವಿಕಾಸವಾದವು ಖಂಡಿಸಲ್ಪಡುತ್ತದೆ. ದಾರ್ಶನಿಕರ ಮತವೇನೆಂದರೆ – ಮೂಲ ಕಾರಣನಾದ ಪರಮಾತ್ಮನು ನಿಷ್ಕಾರಣವಾಗಿಯೇ ವಿಶ್ವ ವೈಚಿತ್ರ್ಯದ ವಿಧಾಯಕನೆಂದಾದರೆ, ಅವನಲ್ಲಿ ವೈಷಮ್ಯವಿರುವುದೆಂಬುದು ಅನಿವಾರ್ಯವಾಗುವುದು. ಅತಃ ಸರ್ವ ಪ್ರಾಣಿಗಳ ವಿಚಿತ್ರ ಕರ್ಮಾನುಸಾರವಾಗಿಯೇ ಭಗವಂತನು ವಿಶ್ವದ ವಿಧಾನವನ್ನು ಮಾಡುತ್ತಾನೆ. ಮಹಾ ಪ್ರಳಯ ಕಾಲದಲ್ಲಿ ಅನಂತ ಬ್ರಹ್ಮಾಂಡಗಳು ಕಾರಣನಲ್ಲಿ ವಿಲಯ ಹೊಂದುತ್ತವೆ ಮತ್ತು ಸೃಷ್ಟಿ ಕಾಲದಲ್ಲಿ ಅದೇ ಮಹಾಕಾರಣದಿಂದ ಪುನಃ ಪ್ರಾದುರ್ಭಾವವಾಗುತ್ತದೆ ಚಿಕ್ಕದಾದ ವಟ ಬೀಜದೊಳಗೆ ಅಂಕುರ, ನಾಳ, ಸ್ಕಂಧ, ಶಾಖೆ, ಉಪಶಾಖೆ, ಪತ್ರ, ಪಲ್ಲವ ಫಲ – ಎಲ್ಲವೂ ಅಡಗಿರುತ್ತವೆ. ಹೀಗಿಲ್ಲದಿದ್ದರೆ ಭೂಮಿ ಅನಿಲ ಜಲಗಳ ಸಂಸರ್ಗವಿದ್ದರೂ ಅದರ ವಿಕಾಸ ಹೇಗಾದೀತು? ಇಷ್ಟೇ ಅಲ್ಲ ಒಂದು ನಟದ ಬೀಜದಲ್ಲಿ ಆರ್ಜುದ-ಖರ್ಜೂರಗಟ್ಟಲೆ ವಟವೃಕ್ಷಗಳ ಅಸ್ತಿತ್ವವನ್ನು ಒಪ್ಪಿಕೊಳ್ಳಬೇಕಾಗುವುದು. ಹೀಗೆಯೇ ಮಹಾಕಾರಣದೊಳಗೆ ಸಮಸ್ತ ಪ್ರಪಂಚದ ಪ್ರಾದುರ್ಭಾವವೆಂದು ಮನ್ನಿಸಿದ ಒಳಕ ಅವನಲ್ಲಿ ಅನಂತ ವಿಜ್ಞಾನಗಳೂ ಅನಂತ ಶಕ್ತಿಗಳೂ ಇವೆಯೆಂದು ಮನ್ನಿಸುವುದು ಅನಿವಾರ್ಯವಾಗುವುದು.

[ಸಶೇಷ]